(ಅ) ಶಿಗ್ಗಾಂವ ಮತ್ತು ಸವಣೂರು ತಾಲ್ಲೂಕುಗಳಲ್ಲಿ ತೋಟಗಾರಿಕೆ ಅಧಿಕಾರಿಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಇನ್ನೂ ಎಷ್ಟು ದಿನಗಳಲ್ಲಿ ಈ ಅಧಿಕಾರಿಗಳ ಸ್ಥಾನವನ್ನು ತುಂಬಲಾಗುವುದು ?

ಶ್ರೀ ಎಸ್. ಬಂಗಾರಪ್ಪ (ಕೃಷಿ ಮತ್ತು ತೋಟಗಾರಿಕೆ ಸಚಿವರು) .—

(ಅ) ತೋಟಗಾರಿಕೆ ಅಧಿಕಾರಿಗಳ ಹುದ್ದೆಗಳು ಇರುವುದಿಲ್ಲ. ಆದಾಗ್ಯೂ ರಾಜ್ಯದಲ್ಲಿ ಒಟ್ಟು ೨೮೮ ಸಹಾಯಕ ತೋಟಗಾರಿಕೆ ಅಧಿಕಾರಿಗಳ ಹುದ್ದೆಗಳು ಖಾಲಿ ಇವೆ. ಹಾಲಿ ಧಾರವಾಡ ಜಿಲ್ಲೆಯಲ್ಲಿ ಒಟ್ಟು ೮ ತಾಲ್ಲೂಕು ಮಟ್ಟದ ಅಧಿಕಾರಿಗಳ ಹುದ್ದೆ ಖಾಲಿ ಇದೆ.

(ಆ) ಬಂದಿದೆ. ಸರಕಾರದ ಅಧಿಸೂಚನೆ ಸಂಖ್ಯೆ ಎ.ಹೆಚ್.ಡಿ ೩೨೮ ಎ.ಹೆಚ್.ಇ ೯೦, ದಿನಾಂಕ ೨೯-೫-೯೦ರಲ್ಲಿ ಸವಣೂರು ತಾಲ್ಲೂಕಿನ ಹುದ್ದೆಯನ್ನು ಭರ್ತಿಮಾಡಲಾಗಿದೆ. ಹಾಗೂ ಶಿಗ್ಗಾಂವ ತಾಲ್ಲೂಕು ತೋಟಗಾರಿಕೆ ಅಧಿಕಾರಿಯ ಹುದ್ದೆಯನ್ನು ಆದಷ್ಟು ಬೇಗನೆ ಭರ್ತಿಮಾಡಲಾಗುವುದು.

ಶ್ರೀ ಮಂಜುನಾಥ್ ಸಿ. ಕುನೂರ್.—ಅಧ್ಯಕ್ಷರೇ, ರಾಜ್ಯದಲ್ಲಿ ೨೦೮ ಸಹಾಯಕ ತೋಟಗಾರಿಕಾ ಅಧಿಕಾರಿಗಳ ಹುದ್ದೆ ಖಾಲಿಯಿದ್ದು ಧಾರವಾಡ ಜಿಲ್ಲೆಯಲ್ಲೇ ೮ ತಾಲ್ಲೂಕು ಮಟ್ಟದ ಅಧಿಕಾರಿಗಳ ಹುದ್ದೆ ಖಾಲಿ ಇವೆ ಮತ್ತು ಶಿಗ್ಗಾಂವ ತಾಲೂಕಿನಲ್ಲಿ ತೋಟಗಾರಿಕೆ ಅಧಿಕಾರಿಗಳನ್ನು ತೀವ್ರವಾಗಿ ತುಂಬುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಈ ತೋಟಗಾರಿಕೆಗೆ ನಾವು ಬಹಳ ಮಹತ್ವ ಕೊಡಬೇಕಾಗಿದೆ. ಸತತವಾಗಿ ೩-೪ ವರ್ಷಗಳಿಂದ ಬರಗಾಲ ಬಂದಿದ್ದರಿಂದ ಹಣ್ಣು ಹಂಪಲುಗಳ ಉತ್ಪತ್ತಿ ಕಡಿಮೆ ಆಗಿದೆ. ಈ ದಿಶೆಯಲ್ಲಿ ರೈತರಿಗೆ ತರಬೇತಿ ಮತ್ತು ಸಾಲಸೌಲಭ್ಯ ಕೊಡುವ ಬಗ್ಗೆ ಮಾನ್ಯ ಸಚಿವರು ತೀವ್ರ ಗಮನ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಹೇಳಿರುವಂತೆ ತೋಟಗಾರಿಕೆ ಅಧಿಕಾರಿಗಳನ್ನು ನೇಮಿಸುವ ವಿಚಾರದಲ್ಲಿ ಸಧ್ಯಕ್ಕೆ ಎಕಾನಮಿ ಆರ್ಡರ್ ಇರುವುದರಿಂದ ತುಂಬುವುದಕ್ಕೆ ಆಗುವುದಿಲ್ಲ. ಈ ಬಗ್ಗೆ ಸರ್ಕಾರ ಅಂತಿಮ ತೀರ್ಮಾನ ತೆಗೆದುಕೊಂಡಾಗ ಆ ಹುದ್ದೆಗಳನ್ನು ತುಂಬುವ ಬಗ್ಗೆ ನಾನು ನನ್ನ ಜವಾಬ್ದಾರಿಯನ್ನು ನಿರ್ವಹಿಸುತ್ತೇನೆ.

ಶ್ರೀ ಗೋಪಿನಾಥ ಆರ್. ಸಾಂದ್ರಾ.— ಅಧ್ಯಕ್ಷರೇ, ಕೇವಲ ಪ್ರಶ್ನೆ ಹಾಕಿದ ಸದಸ್ಯರಿಗೆ ಮಾತ್ರ ಉತ್ತರ ಸಿಗುತ್ತಿದೆ. ಉಳಿದವರಿಗೆ ಸಹ ಉಪಪ್ರಶ್ನೆ ಹಾಕುವುದಕ್ಕೆ ಅವಕಾಶ ಮಾಡಿಕೊಡಬೇಕು ಕೊನೆ ಪಕ್ಷ ಸಂಬಂಧಪಟ್ಟ ಜಿಲ್ಲಾ ಶಾಸಕರಿಗಾದರೂ ಉತ್ತರ ಪ್ರತಿ ಸಿಗುವಂತೆ ವ್ಯವಸ್ಥೆ ಮಾಡಬೇಕು.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸದಸ್ಯರ ಅಭಿಪ್ರಾಯವನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಗಿನ ಸಭೆಯ ನಿಯಮಾವಳಿ ಪ್ರಕಾರ ಎಲ್ಲರಿಗೂ ಉತ್ತರ ಕಳಿಸಲು ಸಾಧ್ಯವಿಲ್ಲ. ಹಿಂದೆ ಆರೀತಿ ಇತ್ತು. ವೈಯಕ್ತಿಕವಾಗಿ ನಿಮ್ಮ ಅಭಿಪ್ರಾಯ ಒಪ್ಪುತ್ತೇನೆ. ಕೆಲವು ಸಲ ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ ಪ್ರಶ್ನೆಗಳಿರುತ್ತವೆ. ಆದ್ದರಿಂದ ಎಲ್ಲರಿಗೂ ಉತ್ತರ ಕಳಿಸುವುದು ಒಳ್ಳೆಯದು.

ಅಧ್ಯಕ್ಷರು.— ಎಲ್ಲರಿಗೂ ಉತ್ತರ ಕಳಿಸುತ್ತಿದ್ದೇವೆ. ನಿಮಗೆ ಇಂದು ಮಿಸ್ ಆಗಿರಬೇಕು. ಸರ್ವೇ ಸಾಧಾರಣವಾಗಿ ಎಲ್ಲರಿಗೂ ಉತ್ತರ ಕಳಿಸಲಾಗುತ್ತಿದೆ.

ಬಿಜಾಪುರ, ಬೆಳಗಾಂ ಮತ್ತು ಕಾರವಾರಗಳಲ್ಲಿ ಸ್ನಾತಕೋತ್ತರ ಕೇಂದ್ರಗಳ ಸ್ಥಾಪನೆ.

೧೨೭೫. ಡಾ॥ ಆರ್. ಬಿ. ಚೌದ್ರಿ (ಸಿಂಧಗಿ) ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ, ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಬಿಜಾಪುರ, ಬೆಳಗಾಂ ಮತ್ತು ಕಾರವಾರಗಳಲ್ಲಿ ಸ್ನಾತಕೋತ್ತರ ಕೇಂದ್ರಗಳನ್ನು ಒಮ್ಮೆಲೆ ತೆರೆಯಬೇಕಿತ್ತೆನ್ನುವ ಅಂಶವು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಬೆಳಗಾಂನಲ್ಲಿ ಮಾತ್ರವೇ ಸ್ನಾತಕೋತ್ತರ ಕೇಂದ್ರವನ್ನು ಸ್ಥಾಪಿಸಲು ಕಾರಣವೇನು ?

ಇ) ಈಗಾಲಾದರೂ ಸರ್ಕಾರ ಬಿಜಾಪುರ ಮತ್ತು ಕಾರವಾರಗಳಲ್ಲಿ ಸ್ನಾತಕೋತ್ತರ ಕೇಂದ್ರಗಳನ್ನು ಸ್ಥಾಪಿಸುವುದೇ ?

ಈ) ಹಾಗಿದ್ದಲ್ಲಿ ಪ್ರತಿ ಪರ್ಷ ಕಾರವಾರ ಮತ್ತು ಬಿಜಾಪುರ ಸ್ನಾತಕೋತ್ತರ ಕೇಂದ್ರಗಳಿಗೆ ಕೊಡ ಮಾಡುವ ಅನುದಾನವೆಷ್ಟು ?

ಶ್ರೀ ಕೆ. ಹೆಚ್. ರಂಗನಾಥ—(ಶಿಕ್ಷಣ ಯುವಜನ ಸೇವೆ, ಕ್ರೀಡೆ ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು)

ಅ) ಇಲ್ಲ

ಆ) ಪ್ರಶ್ನೆ ಉದ್ಭವಿಸುವುದಿಲ್ಲ

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

೧೧–೪೫ ಎ.ಎಂ.

ಡಾ॥ ಆರ್. ಬಿ. ಚೌದರಿ.— ಮಾನ್ಯ ಅಧ್ಯಕ್ಷರೇ, ನನಗೆ ತಿಳಿದ ಮಟ್ಟಿಗೆ ಸುಮಾರು ನಾಲ್ಕು ವರ್ಷಗಳಿಂದ ಸೆನೆಟ್ ಸಭೆಯಲ್ಲಿ ಈ ವಿಷಯದ ಬಗ್ಗೆ ಚರ್ಚೆ ನಡೆಯುತ್ತಿದೆ. ತಾವು ಸ್ನಾತಕೋತ್ತರ ಕೇಂದ್ರವನ್ನು ಬಿಜಾಪುರ ಹಾಗೂ ಕಾರವಾರ ಗಳಲ್ಲಿ ತೆಗೆಯುವ ವಿಚಾರ ಇಲ್ಲ ಎಂದು ಹೇಳಿದ್ದೀರಿ ? ಇದು ನಿಜವೇ ?

ಶ್ರೀ ಕೆ. ಹೆಚ್. ರಂಗನಾಥ.— ಮಾನ್ಯ ಅಧ್ಯಕ್ಷರೇ, ಈಗ ಬೆಳಗಾಂನಲ್ಲಿ ಈಗ ತಾನೆ ಪ್ರಾರಂಭವಾಗಿದೆ. ಅಲ್ಲಿ ಕೂಡಾ ವ್ಯವಸ್ಥಿತವಾಗಿ ಆದಕ್ಕೆ ಬೇಕಾದಂಥ ಹಣವನ್ನು ಒದಗಿಸಿ, ಅದು ಸಾಕಷ್ಟು ಅನುಕೂಲವನ್ನು ಪಡೆಯುವುದಕ್ಕೆ ಹಾಗೂ ಒಂದು ಮಟ್ಟಕ್ಕೆ ಬರಬೇಕಾದರೆ ಇನ್ನು ಸ್ವಲ್ಪ ಕಾಲ ಬೇಕಾಗುತ್ತದೆ. ಮತ್ತೆ ಆ ಹಿನ್ನೆಲೆಯಲ್ಲಿ ಬಿಜಾಪುರಕ್ಕೆ ಮಾನ್ಯ ಸದಸ್ಯರು ಕೇಳುತ್ತಿದ್ದಾರೆ ಮಾನ್ಯ ಸದಸ್ಯರ ಬೇಡಿಕೆಯನ್ನು ನಾನು ಅಲ್ಲಗಳೆಯುವುದಿಲ್ಲ. ಆದರೆ ಸರ್ಕಾರಕ್ಕೆ ಈಗ ಅದನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಡಾ॥ ಆರ್. ಬಿ. ಚೌದರಿ.— ಬೆಳಗಾಂದು ಈಗ ಶುರುವಾಗಿದೆ ಎಂದು ಹೇಳಿದ್ದಾರೆ. ಆದರೆ ಅಲ್ಲಿ ಪಿ. ಜಿ. ಸೆಂಟರ್‌ನ್ನು ತೆಗೆದು ಐದಾರು ವರ್ಷವಾಯಿತು. ಬಿಜಾಪುರದಲ್ಲಿ ಸಹ ಪಿ. ಜಿ. ಸೆಂಟರನ್ನು ತೆಗೆಯುವುದಿಲ್ಲ ಎಂದು ಹೇಳುವುದಕ್ಕೆ ಕಾರಣವೇನು ?

ಶ್ರೀ ಕೆ. ಹೆಚ್. ರಂಗನಾಥ್.— ನಾನು ಮೊದಲೇ ಹೇಳಿದಂತೆ ಬೆಳಗಾಂದನ್ನು ವ್ಯವಸ್ಥಿತವಾಗಿ ಮಾಡಿದ ಮೇಲೆ ಬಿಜಾಪುರದ ಬಗ್ಗೆ ನೋಡಿಕೊಳ್ಳೋಣ.

ಶ್ರೀ ಆರ್. ಬಿ. ಚೌಧರಿ.— ಯೂನಿವರ್ಸಿಟಿಯವರು ಆನ್ಯುಯಲ್ ಗ್ರಾಂಟನ್ನು ಕೇಳಿದ್ದಾರೆ. ೩೦ ಲಕ್ಷ ಬಿಜಾಪುರಕ್ಕೆ ಮಂತ್ರು ೨೦ ಲಕ್ಷ ರೂಪಾಯಿಗಳನ್ನು ಕಾರವಾರಕ್ಕೂ ಸಹಿತ ಕೊಟ್ಟಿದ್ದಾರೆ, ಇದು ನಿಜವೇ ?

ಶ್ರೀ ಕೆ. ಹೆಚ್. ರಂಗನಾಥ.— ಅಲ್ಲಿ ಸ್ನಾತಕೋತ್ತರ ಕೇಂದ್ರವನ್ನು ತೆಗೆಯದೇ ಇದ್ದಾಗ ಗ್ರಾಂಟ್‌ನ್ನು ಕೊಡುವ ಪ್ರಶ್ನೆಯೇ ಇಲ್ಲ.

ಅಧ್ಯಕ್ಷರು.—ಅಲ್ಲಿ ತೆಗೆದಮೇಲೆ ಗ್ರಾಂಟನ್ನು ಕೇಳಿ.

ಶಿವಾಜಿನಗರದಲ್ಲಿ ಸರ್ಕಾರಿ ಶಾಲಾ ಕಾಲೇಜುಂಗಳು ಉಪಯೋಗಿಸುತ್ತಿರುವ ಕಟ್ಟಡಗಳು

೧೩೪೫ ಶ್ರೀ ಎ. ಕೆ. ಆನಂತಕೃಷ್ಣ (ಶಿವಾಜಿನಗರ) ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಶಿವಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿ ಸರ್ಕಾರಿ ಶಾಲಾ ಕಾಲೇಜುಗಳು ಉಪಯೋಗಿಸುತ್ತಿರುವ ಕಟ್ಟಡಗಳು (ಪಟ್ಟಿ ನೀಡುವುದು).

ಆ) ಅಂತಹ ಕಟ್ಟಡಗಳಲ್ಲಿ ನೀರಿನ ವಿದ್ಯುಚ್ಛಕ್ತಿಯ ಶೌಚಗೃಹಗಳ ಹಾಗೂ ಆಟದ ಮೈದಾನ ಗಳು ಮತ್ತಿತರ ಸೌಲಭ್ಯಗಳ ನಿರ್ವಹಣಾ ವಿಧಾನ ಹಾಗೂ ವ್ಯವಸ್ಥೆ ಆಗಿದೆಯೇ ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು)